# ಶ್ರೀಮಾತೆಯವರ ಭಾವಗಾಂಭೀರ್ಯ

ಮಾತಾ ತ್ಯಾಗಮಯೀ

ಶ್ರೀಮಾತೆಯವರ ಹಲವಾರು ದೈವೀಗುಣಗಳಲ್ಲಿ ಗಾಂಭೀರ್ಯವೂ ಒಂದು. ಅವರ ಸರಳ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಗಭೀರವಾದ ಅನುಭಾವ ಮತ್ತು ದಿವ್ಯತೆ ಅಡಗಿವೆ. ಇದರ ಮನೋಜ್ಞ ವಿವರಣೆಯನ್ನು ನೀಡಿರುವ ಮಾತಾಜಿಯವರು ಚಳ್ಳಕೆರೆಯ ಶ್ರೀಶಾರದಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



## ಗಗನ ಗಾಂಭೀರ್ಯ

ಶ್ರೀಮಾತೆ ಶಾರದಾದೇವಿಯವರ ಭಾವದಲ್ಲಿ, ಅವರ ಚಿಂತನದಲ್ಲಿ, ಅವರ ಬಗೆಗಿನ ಅಧ್ಯಯನ, ಆಲೋಚನೆ ಮತ್ತು ಮನನಗಳಲ್ಲಿ, ಅವರ ಧ್ಯಾನದಲ್ಲಿ ನಾವು ಮುಂದುವರಿದಂತೆ ಮಹಿಮಾನ್ವಿತವಾದ ಅವರ ವ್ಯಕ್ತಿತ್ವದ ಘನ ಗಾಂಭೀರ್ಯದ ಅನುಭವ ನಮಗಾಗುತ್ತದೆ. ಶ್ರೀಮಾತೆಯವರ ಗಂಭೀರ ಜೀವನದಲ್ಲಿ, ಅತ್ಯಮೋಘ ಚಾರಿತ್ರ್ಯದಲ್ಲಿ ಶ್ರೀರಾಮನ ಮರ್ಯಾದೆಯನ್ನು, ಶ್ರೀಕೃಷ್ಣನ ಸ್ಥಿತಪ್ರಜ್ಞತೆಯನ್ನು, ದುರ್ಗೆಯ ಶಕ್ತಿಯನ್ನು, ಸೀತೆ–ರಾಧೆಯರ ಪರಿಪೂರ್ಣ ಸಮರ್ಪಣೆಯ ಭಗವದನುರಾಗವನ್ನು, ಶ್ರೀರಾಮಕೃಷ್ಣರಲ್ಲಿನ ಪರಮವೈರಾಗ್ಯ ಹಾಗೂ ಆಧ್ಯಾತ್ಮಿಕ ಸತ್ವಪ್ರಕಾಶವನ್ನು ನಾವು ಕಾಣಬಹುದು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಶ್ರೀಶಾರದಾದೇವಿಯವರ ನೆನಪಾದೊಡನೆ ನನ್ನೊಳಗಿಂದ, 'ಇತರ ದೇವತೆಗಳೆಲ್ಲ ಏನು ಮಹಾ' ಎಂಬ ಉದ್ಗಾರ ಹೊಮ್ಮುತ್ತದೆ." ಶ್ರೀಮಾತೆಯವರನ್ನು ಧ್ಯಾನಿಸುವುದೆಂದರೆ ಸಕಲ ದೇವದೇವಿಯರನ್ನೂ ಧ್ಯಾನಿಸಿದಂತೆ, ಸಕಲ ಪಾವನಗುಣಗಳನ್ನೂ ಮೈಗೂಡಿಸಿಕೊಂಡಂತೆ. ಅವರ ಚಾರಿತ್ರ್ಯದಲ್ಲಿ ಹಾಸುಹೊಕ್ಕಾಗಿರುವ ಪರಮ ಪಾವಿತ್ರ್ಯವನ್ನು, ಘನ ತರ ಗಾಂಭೀರ್ಯವನ್ನು ಪರಿಭಾವಿಸಿದಾಗ ಆಳವಾದ ಆನಂದದ ಅನುಭೂತಿಯಾಗುತ್ತದೆ; ಅಂತರಂಗದ ವಿಕಾಸವಾಗುತ್ತದೆ.

ಗಾಂಭೀರ್ಯವೆಂಬುದು ಒಂದು ವಿಶೇಷ ಗುಣ. ಸಾಮಾನ್ಯ ವ್ಯಕ್ತಿ ತನ್ನ ನಡೆ–ನುಡಿ, ಆಚಾರ–ವ್ಯವಹಾರಗಳಲ್ಲಿ ಬಹಳ ಲಘುವಾಗಿ ವರ್ತಿಸುತ್ತಾನೆ. ಅವನು ಮೇಲುಮೇಲಿನ ಪದರಗಳಲ್ಲಿ ಮಾತ್ರ ಬದುಕುತ್ತಾನೆ. ಅವನಲ್ಲಿ ಆಳ–ಗಾಂಭೀರ್ಯ ಅಷ್ಟಕ್ಕಷ್ಟೇ. ಆದರೆ ಸಾಧಕನಾದವನು ಇನ್ನೂ ಆಳಕ್ಕೆ ಹೋಗು ತ್ತಾನೆ. ವಿಷಯಕೇಂದ್ರಿತ ನಡೆನುಡಿ, ವರ್ತನೆ–ವ್ಯವಹಾರದ ಅಲ್ಪಜೀವನ ಅವನಿಗೆ ರುಚಿಸದು. ಅವನು ತನ್ನ ಮನದ ಪದರಗಳನ್ನು ಭೇದಿಸುತ್ತ, ಅಂತರಂಗದ ಸತ್ಯಶೋಧನೆಯಲ್ಲಿ ಹಿರಿದಾದ ಆಳ–ಗಾಂಭೀರ್ಯಗಳನ್ನು ತನ್ನ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಳ್ಳುತ್ತಾನೆ. ಪ್ರಾಪಂಚಿಕ ವಸ್ತು–ವಿಷಯಗಳು ನಮ್ಮನ್ನು ಹಗುರವಾಗಿಸುತ್ತವೆ, ಅಲ್ಪವಾಗಿಸುತ್ತವೆ. ಭಗವಚ್ಚಿಂತನೆ ನಮ್ಮಲ್ಲಿ ಆಳ–ಗಾಂಭೀರ್ಯಗಳನ್ನು ತುಂಬುತ್ತದೆ, ಗುರುತ್ವವನ್ನು ನೀಡುತ್ತದೆ, ಘನತರ ಚಾರಿತ್ರ್ಯವನ್ನು ರೂಪಿಸುತ್ತದೆ. ಪ್ರಪಂಚ ನಮಗೆ ನೀಡುವ ಆನಂದ ಅಲ್ಪ; ಅದು ದುಃಖಮಿಶ್ರಿತವಾದದ್ದು. ಭಗವಂತ ನಮಗೆ ನೀಡುವ ಆನಂದ, ದುಃಖಸ್ಪರ್ಶವಿಲ್ಲದ ಅಮೋಘ ಭೂಮಾನಂದ. ಸಾಧಾರಣ ಸಾಧಕನೇ ತನ್ನ ಸಾಧನಾಬಲದಿಂದ ಇಷ್ಟೊಂದು ಗಂಭೀರ ವ್ಯಕ್ತಿತ್ವವನ್ನು ಹೊಂದಿರುವಾಗ, ಭಗವತಿಯೇ ಧರೆಗಿಳಿದು ಬಂದಾಗ ಅಲ್ಲಿ ಇನ್ನೆಷ್ಟೊಂದು ಗಾಂಭೀರ್ಯ ಘನೀಭವಿಸಿರಬೇಕು! ಇದನ್ನು ನಾವು ಭಾವಿಸುವುದೂ ಕಷ್ಟಸಾಧ್ಯ.

## ಬಾಲ್ಯದಲ್ಲೂ ಗಾಂಭೀರ್ಯ

ಶ್ರೀಮಾತೆಯವರ ವ್ಯಕ್ತಿತ್ವ ಬಾಲ್ಯದಿಂದಲೂ ಗಂಭೀರ ಭಾವ ದಿಂದಲೇ ಕೂಡಿತ್ತು. ತನ್ನ ಸ್ನೇಹಿತೆಯರೆಲ್ಲ ಬೊಂಬೆಗಳೊಂದಿಗೆ ಕ್ರೀಡಾಸಕ್ತರಾಗಿದ್ದರೆ, ಶಾರದೆ, ಕಾಳಿ ಲಕ್ಷ್ಮಿಯರ ಮೂರ್ತಿಗಳನ್ನು ಮಾಡಿ, ಅವನ್ನು ಪೂಜಿಸುತ್ತ ಧ್ಯಾನಾಸಕ್ತಳಾಗುತ್ತಿದ್ದಳು. ತನ್ನ ಗೆಳತಿಯರ ನಡುವೆ ಜಗಳ ಹುಟ್ಟಿಕೊಂಡರೆ ಈ ಪುಟ್ಟ ಹುಡುಗಿ ಮಧ್ಯ ಪ್ರವೇಶಿಸಿ ಅದನ್ನು ನಿಲ್ಲಿಸುತ್ತಿದ್ದಳು. ಬಾಲ್ಯದಲ್ಲಿ ಆಗಾಗ ಧ್ಯಾನಮಗ್ನಳಾಗಿ ಅಂತರಂಗದ ಪರಮಸತ್ಯದೊಡನೆ ಒಂದಾಗಿದ್ದ

ದೃಶ್ಯಗಳು ಅಪರೂಪವೇನಾಗಿರಲಿಲ್ಲ. ತನ್ನ ಪುಟ್ಟ ತಮ್ಮಂದಿರನ್ನು ಶಾಲೆಗೆ ಬಿಟ್ಟು ಬರುವಾಗ ತನಗೂ ವಿದ್ಯಾಭ್ಯಾಸ ಬೇಕೆಂಬ ಹಂಬಲ ಅವಳ ಗಂಭೀರ ಚಿಂತನೆಯ ಫಲವೇ ಆಗಿತ್ತು. ಎರಡು ವರ್ಷದ ಬಾಲಕಿ ಸಿಹೋರಿನ ಜಾತ್ರೆಯಲ್ಲಿ ಶ್ರೀರಾಮಕೃಷ್ಣರನ್ನು ತೋರಿಸಿ ಅವರನ್ನು ವಿವಾಹವಾಗುತ್ತೇನೆಂದು ಹೇಳುವಲ್ಲಿ ಬಾಲಿಶತನವಿರಲಿಲ್ಲ; ಘಟನೆ ತಮಾಷೆಯಂತೆ ತೋರಿದರೂ ಬಾಲಕಿಯ ಮನದಲ್ಲಿ ಒಂದು ಗಂಭೀರ ಪ್ರಜ್ಞೆಯಿತ್ತೆಂಬುದು ಸುಳ್ಳಲ್ಲ – ಬಹುಶಃ ಆಕೆಯಲ್ಲಿ ಆಗಲೇ ಅವತಾರೋದ್ದೇಶದ ಅರಿವು ಇದ್ದಿರಬಹುದು. ಮುಂದೆ ಐದನೆಯ ವಯಸ್ಸಿಗೆ ವಿವಾಹವಾಗಿ, ಏಳನೆಯ ವಯಸ್ಸಿಗೆ ಮೊದಲ ಬಾರಿಗೆ ಪತಿಯ ಮನೆಗೆ ಬಂದಾಗ ಬಾಲಿಕೆ ಶಾರದೆ ಶ್ರೀರಾಮಕೃಷ್ಣರಿಗೆ ತಾನಾಗಿ ಪೂಜ್ಯ ಭಾವದಿಂದ ಬಾಗಿ ನಮಿಸಿ, ಅವರ ಪಕ್ಕದಲ್ಲಿ ನಿಂತು ಗಾಳಿ ಬೀಸುತ್ತಾಳೆ – ಎಂಥ ಪ್ರಬುದ್ಧ ವರ್ತನೆ! ಇಂದು ನಾವು ೨೫ ವರ್ಷದ ನಮ್ಮ ಮಕ್ಕಳಲ್ಲಿಯೂ ಆ ಬಗೆಯ ಪ್ರಬುದ್ಧತೆಯನ್ನು, ಗಾಂಭೀರ್ಯವನ್ನು ಕಾಣಲಾರೆವು.

### ಸತಿಯಾಗಿ ಗಾಂಭೀರ್ಯ

ಶ್ರೀರಾಮಕೃಷ್ಣರು ತಮ್ಮ ಸಾಧನೆಗಳ ಹೊಳೆಯಲ್ಲಿ ಕೊಚ್ಚಿ ಹೋಗಿ, ಬಗೆಬಗೆಯ ದಿವ್ಯ ಅನುಭವಗಳನ್ನು ಪಡೆದುಕೊಂಡು, ಆರೋಗ್ಯ ಸುಧಾರಣೆಗೆಂದು ಕಾಮಾರಪುಕುರಕ್ಕೆ ಬಂದಾಗ, ಶ್ರೀಮಾತೆಯವರನ್ನು ಜಯರಾಂಬಾಟಿಯಿಂದ ಕರೆಸಿಕೊಳ್ಳುತ್ತಾರೆ. ಅಲ್ಲಿ ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಜೀವನದ ಆವಶ್ಯಕತೆಯನ್ನು ಶ್ರೀಮಾತೆಯವರಿಗೆ ಮನಗಾಣಿಸುತ್ತಾರೆ. ಒಮ್ಮೆ ಹೇಳುತ್ತಾರೆ, "ನೀನು ನಿನ್ನ ಮಗುವಿಗೆ ಅನ್ನಪ್ರಾಶನ ಮಾಡಿಸುವ ದಿವಸ ಮೈತುಂಬ ಅಲಂಕಾರ ಮಾಡಿಕೊಳ್ಳಬಹುದು. ಸಂಗೀತ–ನೃತ್ಯದ ಕಾರ್ಯಕ್ರಮ ಆಯೋಜಿಸಬಹುದು. ಆದರೆ, ನಿನ್ನ ಮಗು ಸತ್ತಾಗ ಹೃದಯ ಹಿಂಡಿದಂತಾಗಿ ತಲೆಯ ಮೇಲೆ ಕೈಹೊತ್ತು ಕುಳಿತುಕೊಳ್ಳಬೇಕಾಗುತ್ತದೆ." ಶ್ರೀರಾಮಕೃಷ್ಣರು ಮತ್ತೆ ಮತ್ತೆ ಮಕ್ಕಳ ಸಾವಿನ ವಿಷಯವನ್ನೇ ಆಡಿದಾಗ, ಶ್ರೀಮಾತೆಯವರು ಮೆಲುದನಿಯಲ್ಲಿ, "ಏನು, ಹುಟ್ಟಿದ ಮಕ್ಕಳೆಲ್ಲವೂ ಸಾಯುತ್ತವೆಯೆ?" ಎಂದು ಕೇಳುತ್ತಾರೆ. ಆಗ ಶ್ರೀರಾಮಕೃಷ್ಣರು, "ಅಬ್ಬಬ್ಬ, ಈಗ ನಾನು ವಿಷಸರ್ಪದ ಬಾಲವನ್ನು ಮೆಟ್ಟಿದ ಹಾಗಾಯಿತು. ಇವಳಿಗೆ ಬಹಳ ವಿಷಯ ಗೊತ್ತಿರುವ ಹಾಗಿದೆಯಲ್ಲ!" ಎಂದರು. ಶ್ರೀರಾಮಕೃಷ್ಣರ ಆ ಸೂಚನೆಯನ್ನು ಶ್ರೀಮಾತೆಯವರು ಅರ್ಥಮಾಡಿಕೊಂಡರು. ಮುಂದೆಂದೂ ಶ್ರೀಮಾತೆಯವರು ಮಧ್ಯೆ ಮಾತನಾಡಿದುದನ್ನು, ಎದುರುತ್ತರ ಕೊಟ್ಟಿದ್ದನ್ನು ನಾವು ನೋಡುವುದಿಲ್ಲ.

ಮುಂದೊಮ್ಮೆ ಶ್ರೀಮಾತೆಯವರು ಬಾಲಸಹಜ ಮುಗ್ಧತೆಯಿಂದ ಇತರ ಕೆಲವು ಮಹಿಳೆಯರೊಂದಿಗೆ ಬಯಲಾಟ ನೋಡಲು ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಶ್ರೀರಾಮಕೃಷ್ಣರು ಅದಕ್ಕೆ ಅನುಮತಿ ಕೊಡುವುದಿಲ್ಲ. ಇಡಿಯ ನಾಟಕವನ್ನು ತಾವೇ ಅಭಿನಯಿಸಿ ತೋರಿಸುತ್ತಾರೆ. ಹೀಗೆ ಕುಲೀನ ಮರ್ಯಾದೆಯನ್ನು ಎತ್ತಿ ಹಿಡಿಯುವುದರೊಂದಿಗೆ ಗಂಭೀರ ನಡವಳಿಕೆಯ ಅಗತ್ಯವನ್ನು ಅವರು ಬೋಧಿಸುತ್ತಾರೆ. ಶ್ರೀಮಾತೆಯವರು ಈ ಪಾಠವನ್ನು ಯಾವತ್ತೂ ಮರೆಯಲಿಲ್ಲ.

ಶ್ರೀಮಾತೆಯವರು ತಮ್ಮ ಹದಿನೆಂಟನೆಯ ವಯಸ್ಸಿಗೆ ದಕ್ಷಿಣೇಶ್ವರದ ನಹಬತ್ ಅನ್ನು ಪ್ರವೇಶಿಸಿದರು. ಮುಂದಿನ ಹದಿಮೂರು ವರ್ಷಗಳ ಕಾಲ ಪರಿಪೂರ್ಣ ನಿರಹಂಭಾವದ ಅನಾಸಕ್ತ ಭಗವನ್ಮಯ ಜೀವನವನ್ನು ಬದುಕಿ ತೋರಿಸಿದರು. ಎಂತಹ ಸತ್ವಶಾಲಿ ಮನಸ್ಸು ಅದು! ಶ್ರೀರಾಮಕೃಷ್ಣರ ಸೇವೆ – ಅವತಾರಿಯ ಸೇವೆ, ಅದೆಂಥ ಕಠಿಣ ಜವಾಬ್ದಾರಿ! ಅದನ್ನು ಶ್ರೀಮಾತೆಯವರು ಹದವರಿತು ಮಾಡಿದರು. ಎಷ್ಟೋ ಬಾರಿ ಕಿಕ್ಕಿರಿದ ಭಕ್ತರಿಂದಾಗಿ ಪತಿಯ ದರ್ಶನಕ್ಕೂ ಅವರಿಗೆ ಅವಕಾಶವಿರಲಿಲ್ಲ, ಅದನ್ನೂ ಅವರು ಬಯಸಲಿಲ್ಲ. ತಮಗೆ ಯಾವುದೇ ಬಗೆಯ ಮಾನ್ಯತೆ ಬೇಕೆಂದು ಎಲ್ಲೂ ಹಾತೊರೆಯಲಿಲ್ಲ. ಒಂದು ದಿನವೂ ಕೆಲಸ ಹೆಚ್ಚಾಯಿತೆಂದಾಗಲಿ, ಸ್ಥಳ–ಸೌಕರ್ಯಗಳ ಅನನುಕೂಲವಾಯಿತೆಂದಾಗಲಿ ಗೊಣಗಲಿಲ್ಲ. ತಾನು ಕಷ್ಟಗಳ ನಡುವೆ ಇದ್ದೇನೆಂಬ ದುಃಖದ ಭಾವ ಅಲ್ಲಿರಲಿಲ್ಲ. ಭೈರವಿಯಂತಹ ಸಂನ್ಯಾಸಿಯ, ಹೃದಯನಂತಹ ಸಂಬಂಧಿಯ ಅಸಹನೆ–ಕಿರಿಕಿರಿಗೂ ಅವರು ತಾಳ್ಮೆಗೆಡಲಿಲ್ಲ. "ಈ ಅವಧಿಯಲ್ಲಿ ನನ್ನ ಹೃದಯದಲ್ಲಿ ಆನಂದದ ಅಮೃತಕಲಶವಿಟ್ಟಂತೆ ಸದಾ ಅನುಭವವಾಗುತ್ತಿತ್ತು" ಎಂದು ಶ್ರೀಮಾತೆ ಹೇಳಬೇಕಾದರೆ ತಪಸ್ಸಿನಿಂದ ಪಕ್ವವಾದ ಎಂಥ ಸುಶೀಲ ಮನಸ್ಸು ಅವರದ್ದಾಗಿತ್ತು!

"ನೀನು ನನ್ನನ್ನು ಐಹಿಕ ಜೀವನಕ್ಕೆ ಎಳೆತರಲು ಬಂದಿರುವೆಯಾ?" ಎಂದು ಶ್ರೀರಾಮಕೃಷ್ಣರು ಕೇಳಿದರು. "ನಾನು ನಿಮ್ಮನ್ನೇಕೆ ಪ್ರಾಪಂಚಿಕ ಜೀವನಕ್ಕೆ ಎಳೆಯಲಿ? ನಾನು ಬಂದಿರುವುದು ನಿಮ್ಮ ಆಧ್ಯಾತ್ಮಿಕ ಜೀವನದಲ್ಲಿ ಸಹಕರಿಸಲು" ಎಂದರು ಶ್ರೀಮಾತೆಯವರು. ಅರಿವಿನಿಂದ ಮೂಡಿಬಂದ ನೇರ ಉತ್ತರ ಇದು. ಒಂದು ದಿನ ಶ್ರೀರಾಮಕೃಷ್ಣರು ಕಾಳೀ ದೇವಸ್ಥಾನದಿಂದ ಮರಳಿ ಬರುವಾಗ ಅವರ ಕಣ್ಣುಗಳು ಕೆಂಪಗಾಗಿದ್ದವು, ಹೆಜ್ಜೆ ಅಸ್ಥಿರವಾಗಿತ್ತು. ಶರೀರದ ಮೇಲೆ ಸ್ವಾಧೀನವಿರಲಿಲ್ಲ. ಆ ಸ್ಥಿತಿಯಲ್ಲಿ ತೂರಾಡುತ್ತ, ತಮ್ಮ ಕೋಣೆಯನ್ನು ಸ್ವಚ್ಛ ಮಾಡುತ್ತಿರುವ ಶ್ರೀಮಾತೆಯವರ ಹತ್ತಿರ ಹಿಂದಿನಿಂದ ಹೋಗಿ, "ಏನು, ನಾನು ಮದ್ಯ ಕುಡಿದಿದ್ದೇನೆಯೆ?" ಎಂದು ಪ್ರಶ್ನಿಸುತ್ತಾರೆ. ಶ್ರೀಮಾತೆಯವರು ಸಹಜ ಧ್ವನಿಯಲ್ಲಿ, "ನೀವೇಕೆ ಮದ್ಯವನ್ನು ಕುಡಿದೀರಿ? ನೀವು ಪಾನ ಮಾಡಿರುವುದು ಕಾಳಿಯ ನಾಮಾಮೃತವೆಂಬ ಸುರೆಯನ್ನು" ಎನ್ನುತ್ತಾರೆ. ಶ್ರೀರಾಮಕೃಷ್ಣರು ಸಮಾಧಿಯಲ್ಲಿ ಇದ್ದ ಸಂದರ್ಭಗಳಲ್ಲಿ ಶಾಂತ–ಸ್ಥಿರ ಚಿತ್ತದಿಂದ ಶ್ರೀಮಾತೆ ಅವರನ್ನು ನೋಡಿಕೊಳ್ಳುತ್ತಿದ್ದರು. ಹೀಗೆ ಅವರು ಶ್ರೀರಾಮಕೃಷ್ಣರ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದರು. ಇದಕ್ಕೆ ಕಾರಣ ಅವರಲ್ಲಿದ್ದ ಸ್ವಭಾವಸಹಜ ಗಂಭೀರಪ್ರವೃತ್ತಿ.

### ಭಗವದ್ಭಾವ

ಒಂದು ರಾತ್ರಿ ಶ್ರೀಮಾತೆಯವರು ನಹಬತ್‌ನಲ್ಲಿ ಹಾಸಿಗೆಯ ಮೇಲೆ ಕುಳಿತಿದ್ದಾಗ, ದೂರದಿಂದ ಕೊಳಲು ವಾದನ ಕೇಳಿಸುತ್ತದೆ.



ಆ ನೀರವ ರಾತ್ರಿಯ ಕೊಳಲಿನ ನಿನಾದ ಶ್ರೀಮಾತೆಯವರಲ್ಲಿ ಉನ್ನತ ಭಾವವನ್ನು ಜಾಗೃತಗೊಳಿಸಿಬಿಟ್ಟಿತು. ಭಾವೋನ್ಮತ್ತರಾಗಿ ಅವರು ನಗಲಾರಂಭಿಸಿದರು. ಬಳಿಕ ಸಮಾಧಿಸ್ಥರಾದರು. ಎಷ್ಟೋ ಹೊತ್ತಿನ ಮೇಲಷ್ಟೆ ಅವರು ಪ್ರಕೃತಿಸ್ಥರಾದದ್ದು. ಎಂಥ ಗಂಭೀರ ಭಗವದ್ಭಾವ! ಶ್ರೀಮಾತೆಯವರು ಕೊಲ್ಕತಾದಲ್ಲಿ ಒಬ್ಬ ಭಕ್ತರ ಮನೆಗೆ ಹೋಗುತ್ತಾರೆ. ಅಲ್ಲಿ ಹರಿಕಥಾಕಾರನು ಭಾವಭರಿತನಾಗಿ ರಾಧಾ–ಕೃಷ್ಣರ ವಿರಹಗೀತೆಗಳನ್ನು ಹಾಡುತ್ತಿದ್ದಾಗ, ಶ್ರೀಮಾತೆಯವರಲ್ಲಿ ಉನ್ನತ ಭಾವ ಜಾಗೃತವಾಗುತ್ತದೆ. ಅವರು ಸಮಾಧಿಸ್ಥರಾಗುತ್ತಾರೆ. ಒಂದು ಕಡೆಯಿಂದ ಇನ್ನೊಂದು ಕಡೆ ಎತ್ತಿ ಕುಳ್ಳಿರಿಸಿದರೂ ಅವರಿಗೆ ಗೊತ್ತಾಗುತ್ತಿರಲಿಲ್ಲ. ಆಗ ಸಾಮಾನ್ಯರಿಗೆ ಅವರ ಬಳಿಸಾರಲೂ ಭಯವಾಗುತ್ತಿತ್ತು. ಗಂಭೀರ ಭಗವದ್ಭಾವವನ್ನು ಅವರ ಮನಸ್ಸು ಧರಿಸಿಕೊಂಡಿತ್ತು. ಶ್ರೀರಾಮಕೃಷ್ಣರಿಗೆ ಅವರ ಆಳವಾದ ಭಾವಗಾಂಭೀರ್ಯದ ಬಗ್ಗೆ ಗೊತ್ತಿತ್ತು. ಆದ್ದರಿಂದಲೇ ಕಾಶೀಪುರದ ತೋಟದ ಮನೆಯಲ್ಲಿದ್ದಾಗ, ತಮ್ಮ ಜೀವಿತದ ಕೊನೆಯ ದಿನಗಳಲ್ಲಿ, "ಅವಳನ್ನು ಕರೆ, ಅವಳಿಗೆ ನನ್ನ ಭಾವ ಚೆನ್ನಾಗಿ ಅರ್ಥವಾಗುತ್ತದೆ. ನನ್ನ ಮನಸ್ಸು ಬ್ರಹ್ಮಭಾವದ ಕಡೆಗೆ ಹೋಗುತ್ತಿದೆ" ಎಂದು ಹೇಳುತ್ತಾರೆ.

### ಭಗವನ್ಮಯ ಚಾರಿತ್ರ್ಯ

ಶ್ರೀಮಾತೆಯವರ ಗಾಂಭೀರ್ಯಕ್ಕೆ ಆಧಾರವಾಗಿದ್ದುದು ಅವರ ಭಗವನ್ಮಯ ಚಾರಿತ್ರ್ಯ. ನಾವು ನಮ್ಮ ಚಾರಿತ್ರ್ಯವನ್ನು ಜಗತ್ತೆಂಬ ಮಳಲದಿನ್ನೆಗಳ ಮೇಲೆ ಕಟ್ಟಿರುವುದರಿಂದ ನಮ್ಮ ಮನಸ್ಸು ಸದಾ ಚಂಚಲ, ಅಸ್ಥಿರ. ಶ್ರೀಮಾತೆಯವರು ತಮ್ಮ ಚಾರಿತ್ರ್ಯವನ್ನು ಭಗವಂತನೆಂಬ ಭದ್ರ ಅಡಿಪಾಯದ ಮೇಲೆ ಕಟ್ಟಿರುವುದರಿಂದ ಅವರ ಗಂಭೀರ ಚಾರಿತ್ರ್ಯಕ್ಕೆ ಯಾವ ಸಂದರ್ಭದಲ್ಲೂ ಚ್ಯುತಿಯಿಲ್ಲ. ಶ್ರೀಮಾತೆಯವರು ಬಿಡುವಿಲ್ಲದ ಕೆಲಸಕಾರ್ಯಗಳ ನಡುವೆಯೂ ಲಕ್ಷಸಂಖ್ಯೆಯಲ್ಲಿ ಜಪ ಮಾಡುತ್ತಿದ್ದರು. ಪ್ರಾತಃಕಾಲದ ನೀರವ ಮೌನದಲ್ಲಿ ಧ್ಯಾನಾವಸ್ಥಿತಮನಸ್ಕರಾಗಿ ಲೋಕವಿಸ್ಮೃತಿಯನ್ನು, ನಿರಂತರ ಭಗವತ್ ಸಾನ್ನಿಧ್ಯವನ್ನು ಅನುಭವಿಸುತ್ತಿದ್ದರು. ಸಮಾಧಿಯಲ್ಲಿ ವಿಲೀನವಾದ ಅವರ ಮನಸ್ಸು ಮರಳಿ ಬರಲು ಬಯಸುತ್ತಿರಲಿಲ್ಲ. ಅವರು ಈ ಲೋಕದಲ್ಲಿದ್ದರೂ ಆ ಲೋಕದ ಪ್ರಭೆಯಲ್ಲಿ ಉಸಿರಾಡಿದರು, ಆ ಲೋಕದ ಪ್ರಭೆಯನ್ನೇ ಈ ಲೋಕದಲ್ಲೂ ಪಸರಿಸಿದರು. ದಕ್ಷಿಣೇಶ್ವರದಲ್ಲಿ, ಉದ್ಬೋಧನದಲ್ಲಿ, ಜಯರಾಂಬಾಟಿಯಲ್ಲಿ ಅವರ ಮನಸ್ಸು ನಿರಂತರ ಕರ್ಮಶೀಲ ಅಲೆಗಳ ನಡುವೆಯೂ ಸತತವಾಗಿ, ರಾಮಕೃಷ್ಣಗತಪ್ರಾಣವಾಗಿತ್ತು. ವಿಭಿನ್ನ ವಿಪರೀತ ಸ್ವಭಾವಗಳ ವ್ಯಕ್ತಿಗಳ, ಬಗೆಬಗೆಯ ಕಠಿಣ ಕ್ಲೇಶಪೂರ್ಣ ಸನ್ನಿವೇಶಗಳ ಮಧ್ಯೆಯಿದ್ದರೂ ಅವರ ಮನಸ್ಸು ಶ್ರೀರಾಮಕೃಷ್ಣರ ಭಾವದಲ್ಲಿಯೇ ರಂಜಿತವಾಗಿತ್ತು. ಅವರಲ್ಲಿ ಗಗನದಂಥ ಗಾಂಭೀರ್ಯ ಅರಳಿ ನಿಂತದ್ದು, ಅವರು ಅಂಥ ಸುವಿಶಾಲ ಭಗವದ್ಭಾವವನ್ನು ಧರಿಸಿದ್ದರಿಂದಲೇ ಎಂದು ಹೇಳಬಹುದು.

ಷೋಡಶೀಪೂಜೆಯ ಆ ಗಂಭೀರ ರಾತ್ರಿಯಲ್ಲಿ ಅವರ ವ್ಯಕ್ತಿತ್ವದಲ್ಲಿ ಪವಿತ್ರ ಗಾಂಭೀರ್ಯ ಮನೆಮಾಡಿತ್ತು. ಅದರಲ್ಲಿ ಯಾವ ಅಭಿಮಾನವಿರಲಿಲ್ಲ, ಯಾವ ಹೆಚ್ಚುಗಾರಿಕೆಯೂ ಇರಲಿಲ್ಲ. ಅದು ಅತ್ಯಂತ ಸಹಜ ದೈವೀಭಾವವಾಗಿತ್ತು. ಮುಂದೆ ಅವರು ದಕ್ಷಿಣ ದೇಶದ ಪ್ರವಾಸದಿಂದ ಮರಳಿ ಬಂದಾಗ, ಸಂಭ್ರಮ ಸ್ವಾಗತಗಳ ನಡುವೆ ಅದೇ ಸುಪವಿತ್ರ ಗಾಂಭೀರ್ಯ ಎದ್ದುಕಾಣುತ್ತಿತ್ತು.

ಅಸಂಖ್ಯ ಭಕ್ತರ ಆದರ, ಪೂಜೆಗಳನ್ನು ಸ್ವೀಕರಿಸಿಯೂ ಅವರ ಗಾಂಭೀರ್ಯ ಉಬ್ಬಲಿಲ್ಲ. ಯಾವ ಸಂತಸಕ್ಕೂ ಆ ಗಾಂಭೀರ್ಯದ ಗೋಡೆಗಳಲ್ಲಿ ಬಿರುಕು ಬೀಳಲಿಲ್ಲ. ಯಾವ ದುಃಖಕ್ಕೂ – ಕಿರಿಯ ಭಕ್ತರ ವಿಯೋಗವಾದಾಗ, ಭಕ್ತರ ಪಾಪ–ತಾಪರಾಶಿಯನ್ನು ತೆಗೆದುಕೊಂಡಾಗ, ರಾಧಿಯ ಕೊನೆಮೊದಲಿಲ್ಲದ ಉಪಟಳಗಳನ್ನೆದುರಿಸಿದಾಗ – ಅವರ ಗಾಂಭೀರ್ಯದ ಆಳ ಕದಡಲಿಲ್ಲ. ಅವರಲ್ಲಿ ಎಲ್ಲ ಶ್ರೇಷ್ಠ ಗುಣಗಳೂ ಮೇಳವಿಸಿ ಗಗನದಂತಹ ಗಾಂಭೀರ್ಯವನ್ನು ಅರಳಿಸಿದ್ದವು. **–ಸರ್ವಸಂಕಲ್ಪಸಂನ್ಯಾಸಿ–** ಎಲ್ಲ ಆಸೆಗಳನ್ನು ತೊರೆದವರಾದ್ದರಿಂದ ಗಾಂಭೀರ್ಯ ಅವರ ಸಹಜ ನೆಲೆಯಾಗಿತ್ತು. ಆಳವಾದ ವಿವೇಕಪ್ರಜ್ಞೆಯಿಂದ ಕೂಡಿ, ವ್ಯಕ್ತಿವ್ಯಕ್ತಿಗಳನ್ನು ಅವರವರ ಸ್ತರದಿಂದ ಅರ್ಥಮಾಡಿಕೊಂಡು ನಿಭಾಯಿಸುವ, ಅವರೊಂದಿಗೆ ಸ್ಪಂದಿಸುವ ಸೂಕ್ಷ್ಮ ಅಂತರ್ದೃಷ್ಟಿಯನ್ನು ಹೊಂದಿದ್ದರಿಂದ ಹಾಗೂ ಲೋಕವ್ಯವಹಾರಗಳಲ್ಲಿ ಸರ್ವದಾ ಅನಾಸಕ್ತರಾಗಿದ್ದರಿಂದ ಅವರ ಗಂಭೀರಭಾವ ಕದಡುವಂತೆ ಇರಲೇ ಇಲ್ಲ. ಎಂಥ ಪ್ರಕ್ಷುಬ್ಧ ಸನ್ನಿವೇಶದಲ್ಲೂ ಅವರ ಮನಸ್ಸು ಅವಿಚಲವಾಗಿರುತ್ತಿತ್ತು; ಭಗವದ್ಭಾವರಂಜಿತವಾಗಿರುತ್ತಿತ್ತು.

## ಗಂಭೀರತೆಯ ವಿವಿಧ ಆಯಾಮಗಳು

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಮಾತೆಯವರು ವಾರಾಣಸಿಗೆ ಹೋದ ಸಂದರ್ಭದಲ್ಲಿ ಒಮ್ಮೆ ವಿಶ್ವನಾಥನ ಮಹಾಪೂಜೆಯಲ್ಲಿ ಭಾಗವಹಿಸುತ್ತಿದ್ದರು. ಆಗ ಅವರಲ್ಲಿ ಉನ್ನತ ಆಧ್ಯಾತ್ಮಿಕ ಭಾವ ಜಾಗೃತವಾಗಿಬಿಟ್ಟಿತು. ತಾವೇನು ಮಾಡುತ್ತಿರುವರೆಂಬ ಪರಿವೆ ಇಲ್ಲದೆ, ಭಾರವಾದ ಹೆಜ್ಜೆಗಳನ್ನು ಹಾಕಿ ವಸತಿಗೃಹಕ್ಕೆ ಮರಳಿ ಬರುತ್ತಾರೆ. ಶ್ರೀರಾಮಕೃಷ್ಣರೇ ಅವರನ್ನು ಹಾಗೆ ಕೈಹಿಡಿದು ನಡೆಸಿಕೊಂಡು ಬಂದರು ಎನ್ನಬಹುದು – ಜನರೆದುರು ಅವರು ಭಾವಾವಿಷ್ಟರಾಗಿ, ಜನ ಗಲಾಟೆ–ಗೊಂದಲವೆಬ್ಬಿಸುವುದು ಬೇಡ ಎಂದು, ಸಮಾಜದೆದುರು ಗಂಭೀರವಾಗಿರಬೇಕು ಎಂದು. ಅಂದು ಮಾತ್ರವಲ್ಲ. ಮುಂದೆಯೂ ಎಂದೆಂದಿಗೂ ಶ್ರೀರಾಮಕೃಷ್ಣರೇ ಅವರನ್ನು ಕೈಹಿಡಿದು ನಡೆಸಿದ್ದು. ಅವರು ಮುಂದೆ ಭಕ್ತರಿಗೆ ಮಂತ್ರ ನೀಡುವ ಸಂದರ್ಭಗಳಲ್ಲಿ ಹೇಳುತ್ತಿದ್ದರು, "ಶ್ರೀರಾಮಕೃಷ್ಣರೇ ನಿಮ್ಮ ಗುರು, ಸರ್ವಸ್ವ, ನಾನು ಅವರ ಚರಣದಾಸಿ."

ಶ್ರೀಮಾತೆಯವರ ಸೋದರರ ನಡುವೆ ಆಸ್ತಿ ವಿಭಜನೆಗಾಗಿ ವಾಗ್ವಿವಾದ, ಮನಸ್ತಾಪಗಳು ನಡೆಯುತ್ತಿದ್ದಾಗ, ತಮ್ಮ ಮನೆಯ ಜಗಲಿಯ ಮೇಲೆ ಕುಳಿತಿದ್ದ ಶ್ರೀಮಾತೆಯವರು ನಿರ್ಲಿಪ್ತ ಮಂದಹಾಸವನ್ನು ಬೀರುತ್ತಾರೆ – ಅವರ ಮನಸ್ಸು ಲೌಕಿಕ ಸಂಬಂಧಗಳನ್ನು ಮೀರಿ ಗಂಭೀರ ಭಾವದಲ್ಲಿ ವಿಹರಿಸುತ್ತಿತ್ತು. ಶ್ರೀರಾಮಕೃಷ್ಣರ ಸಾಧುಬ್ರಹ್ಮಚಾರಿ ವೃಂದವೆಲ್ಲ ತಮ್ಮ ಸಂತಾನವೇ ಆದರೂ, ಶ್ರೀಮಾತೆಯವರು ಅವರೊಂದಿಗೆ, ಆತ್ಮೀಯತೆಯೊಂದಿಗೆ ಒಂದು ಗಂಭೀರ ಅಂತರವನ್ನೂ ಇರಿಸಿಕೊಂಡಿದ್ದರು. ಪಾಶ್ಚಾತ್ಯ ಭಕ್ತೆಯರು ಅವರ ಬಳಿ ಸಾರಿದಾಗ ಅವರ ಧಾರ್ಮಿಕ ಭಾವನೆಗಳನ್ನು ಗ್ರಹಿಸಿ, ಸ್ಪಂದಿಸುವ ಹೃದಯವೈಶಾಲ್ಯ, ಭಾವ ಗಾಂಭೀರ್ಯ ಅವರಲ್ಲಿತ್ತು.

ಅವರ ಆಳವಾದ ಗಾಂಭೀರ್ಯಪೂರ್ಣ ಭಗವನ್ಮಯ ವ್ಯಕ್ತಿತ್ವದ ಫಲವಾಗಿ ಎಂಥ ಲೋಕಪಾವನಕಾರಿಯಾದ ದೈವೀ ಅನುಭವಗಳು ಅವರಿಗೆ ಉಂಟಾದವು! ಶ್ರೀಮಾತೆಯವರು ನೀಲಾಂಬರ ಬಾಬುಗಳ ತೋಟದ ಮನೆಯಲ್ಲಿದ್ದಾಗ, ಹುಣ್ಣಿಮೆಯ ರಾತ್ರಿಯಲ್ಲಿ ಪವಿತ್ರ ಮೌನ ಎಲ್ಲೆಡೆ ಆವರಿಸಿರುವಾಗ, ಗಂಗೆಯ ದಡದ ಮೇಲೆ ಕುಳಿತಿದ್ದಾರೆ. ಸುತ್ತಲೂ ಹಾಲು ಬೆಳದಿಂಗಳು, ಗಂಗೆಯ ಪವಿತ್ರ ಪ್ರವಾಹದ ಕಲರವ, ಅಲೆಗಳ ಮೇಲೆ ಚಂದಿರನ ಶ್ವೇತಕಿರಣಗಳ ಛಾಯೆ – ಒಟ್ಟಾರೆ ದಿವ್ಯವಾದ ಪ್ರಕೃತಿಸೌಂದರ್ಯ ಅವರ ಮನಸ್ಸನ್ನಾವರಿಸಿದೆ. ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ಹಿಂದಿನಿಂದ ಬಂದು ನದಿಯೊಳಗೆ ಪ್ರವೇಶಿಸಿದರು. ಶ್ರೀರಾಮಕೃಷ್ಣರ ಪವಿತ್ರ ಜ್ಯೋತಿರ್ಮಯ ಶರೀರ ಗಂಗಾಜಲದಲ್ಲಿ ಕರಗಿ ಒಂದಾಯಿತು. ಶ್ರೀಮಾತೆಯವರು ಮೂಕವಿಸ್ಮಿತರಾಗಿ ನೋಡುತ್ತಿದ್ದಾಗ, ಸ್ವಾಮಿ ವಿವೇಕಾನಂದರು ಅಲ್ಲಿ ಪ್ರಕಟಗೊಂಡು, ಆವೇಶಭರಿತರಾಗಿ, "ಜೈ ರಾಮಕೃಷ್ಣ" ಎಂದು ಗಟ್ಟಿಯಾಗಿ ಉದ್ಘೋಷಿಸುತ್ತ, ಸುತ್ತ ನೆರೆದಿದ್ದ ಸಹಸ್ರಾರು ಜನರ ಮೇಲೆ ಆ ಗಂಗಾಜಲವನ್ನು ಸಿಂಪಡಿಸಿದರು. ಆಗ ಆ ಜನರೆಲ್ಲರೂ ಮುಕ್ತರಾಗುತ್ತಾರೆ. ಇಂತಹ ಅನೇಕ ದರ್ಶನಾನುಭವಗಳು ಶ್ರೀಮಾತೆಗೆ ಆಗಿರಬೇಕಾದರೆ ಮಾನವತೆಯ ಕಷ್ಟಪರಿಹಾರಕ್ಕಾಗಿ ಅವರ ಹೃದಯ ಅದೆಷ್ಟು ತೀವ್ರವಾಗಿ ಮಿಡಿದಿರಬೇಕು ಹಾಗೂ ಅವರ ಮನಸ್ಸು ಅದೆಷ್ಟು ಗಹನವಾದ ಗಂಭೀರ ಭಗವದ್ಭಾವದಲ್ಲಿರಬೇಕು!

ಶ್ರೀಮಾತೆಯವರು ಓರಿಸ್ಸಾದ ಕೋಥಾರ್ ಎಂಬ ಸ್ಥಳಕ್ಕೆ ಹೋದಾಗ, ಒಂದು ಸಾಯಂಕಾಲ, ಏಕಾಂಗಿಯಾಗಿ ಕುಳಿತು ಗಾಢಚಿಂತನೆಯಲ್ಲಿ ಮುಳುಗಿದ್ದರು. ಒಬ್ಬ ಬ್ರಹ್ಮಚಾರಿಯ ಹತ್ತಿರ, "ಒಬ್ಬನೇ ಚಂದ್ರ ಮತ್ತೆ ಮತ್ತೆ ಹುಟ್ಟಿ ಬರುತ್ತಾನೆ, ಹಾಗೇ ಒಬ್ಬನೇ ಭಗವಂತ ಮತ್ತೆ ಮತ್ತೆ ಅವತರಿಸಿ ಬರುತ್ತಾನೆ. ಬೇರೆ ಉಪಾಯವಿಲ್ಲ. ಠಾಕೂರರ ಕಷ್ಟವನ್ನು ಅರ್ಥಮಾಡಿಕೊಳ್ಳುವವರು ಯಾರು?" ಎಂದು ಕೇಳುತ್ತಾರೆ. ಅವತಾರಪುರುಷನ ಆಗಮನ ಚಂದ್ರನ ಆಗಮನದಂತೆ. ಚಂದ್ರನ ಉದಯದಿಂದ ಕಾಂತಿಯೂ, ಶಾಂತಿಯೂ ಹರಡುವಂತೆ ಭಗವಂತನ ಅವತರಣದಿಂದ ಜನ ಮನದಲ್ಲಿ ಕಾಂತಿ–ಶಾಂತಿ ಪಸರಿಸುತ್ತದೆ. ಆಗ ಆ ಬ್ರಹ್ಮಚಾರಿಯು, "ಹಾಗೆ ಬಂದು ಹೋಗುವ ಕಷ್ಟ ಶ್ರೀರಾಮಕೃಷ್ಣರಿಗೊಬ್ಬರಿಗೇ ಏನು? ನಿಮಗೂ ಕೂಡ ಕಷ್ಟವಲ್ಲವೆ?" ಎಂದು ಕೇಳುತ್ತಾರೆ. ಶ್ರೀಮಾತೆಯವರು ಕೂಡಲೆ ಉತ್ತರಿಸುತ್ತಾರೆ, " 'ನಾನು ಯಂತ್ರ. ನೀನು ಚಾಲಕ. ನಾನು ಗೃಹ, ನೀನು ಯಜಮಾನ. ನೀನು ಮಾಡಿಸಿದಂತೆ ನಾನು ಮಾಡುತ್ತೇನೆ.' ಎಂಬ ಈ ಮಾತು ನಿನಗೆ ತಿಳಿಯದೇನು? ಎಲ್ಲವೂ ಠಾಕೂರರೇ. ಅವರ ಹೊರತಾಗಿ ಯಾವುದೂ ಇಲ್ಲ." ಇಲ್ಲಿ ನಾವು ಕಾಣುವುದು ಪೂರ್ಣ ನಿರಭಿಮಾನ ಮತ್ತು ನಿರಹಂಕಾರಗಳನ್ನು, ತಮ್ಮ ಅಲ್ಪ ಇಚ್ಛೆ–ಅಹಮಿಕೆಯನ್ನು ಭಗವಂತನ ಭೂಮೇಚ್ಛೆಯಲ್ಲಿ ವಿಲೀನಗೊಳಿಸಿದ ಪರಿಣಾಮವಾಗಿ ಉದಿಸಿದ ಗಗನದಂಥ ಗಾಂಭೀರ್ಯವದು.

**ಆಧ್ಯಾತ್ಮಿಕ ಜೀವನದ ಅತ್ಯುನ್ನತ ಸ್ಥಿತಿಯೆಂದರೆ, "ಪರಿಪೂರ್ಣ ಆತ್ಮಸಮರ್ಪಣೆ; ಭೌತಿಕ ವಿಷಯಸ್ತರದಲ್ಲಿ ತನ್ನತನದ ವಿನಷ್ಟಿ, ಆತ್ಮನಾಗಿ ತನ್ನ ಅಭಿವ್ಯಕ್ತಿ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಶ್ರೀಮಾತೆಯವರು ಆ ಸ್ಥಿತಿಯಲ್ಲಿ ಸಂಸ್ಥಿತರಾಗಿದ್ದರು. ಪರಿಣಾಮವಾಗಿ ಭಗಿನಿ ನಿವೇದಿತಾ ಹೇಳುವಂತೆ ಅವರ ಜೀವನ ಬೀಸುವ ಮಂದಾನಿಲದಂತೆ, ಬೆಳಕು ನೀಡುವ ಸೂರ್ಯಕಿರಣದಂತೆ, ಹೂದೋಟದ ಕಂಪಿನಂತೆ, ಗಂಗೆಯ ತಂಪಿನಂತೆ – ತುಂಬ ಮೌನ, ತುಂಬ ಪ್ರಶಾಂತ! ಹಾಗೆಯೇ ಮೌನವಾಗಿಯೇ ನಮ್ಮ ಮನದೊಳಗೆ ಕದ್ದು ಪ್ರವೇಶ ಮಾಡಿಬಿಡುವ ಪ್ರಚಂಡ ಆಕರ್ಷಕ ಶಕ್ತಿಯಿಂದ ಕೂಡಿದುದು. ಶ್ರೀಮಾತೆಯವರ ಭಾವಚಿತ್ರವನ್ನು ದಿಟ್ಟಿಸಿದಾಗ, ಅದು ತಿಳಿದುಬರುತ್ತದೆ. ಅವರ ಆ ತರುಣಾರುಣ ಆಕೃತಿಯಲ್ಲಿ, ಗಂಭೀರ ವದನದಲ್ಲಿ, ಸ್ನಿಗ್ಧ ಮಂದಹಾಸದಲ್ಲಿ, ದಯಾರ್ದ್ರದೃಷ್ಟಿಯಲ್ಲಿ ಪರಮಶಾಂತಿ, ಪವಿತ್ರತೆ ನೆಲಸಿದೆ; ಯಾವ ಪವಿತ್ರ ಚೆಂಬೆಳಕು ನಮ್ಮ ಮನಸ್ಸಿನ ವಿಕಾರ ಅಶುಚಿಯನ್ನೆಲ್ಲ ತೊಳೆದು ಹಾಕಿ ದೈವೀಗಾಂಭೀರ್ಯ ಮತ್ತು ಆನಂದಗಳನ್ನು ಅರಳಿಸುವುದೋ, ಅಂಥ ಪರಮಶಾಂತಿ ಅಲ್ಲಿ ಒಡಮೂಡಿದೆ.**